ಒಮ್ಮೆ ಹೀಗಾಯ್ತು "ನಿಲ್ಲಿ ಮೋಡಗಳೇ ಎಲ್ಲಿ ಓಡುವಿರಿ, ನಾಲ್ಕು ಹನಿಯ ಚೆಲ್ಲಿ' ಎನ್ನುವಂತೆ ಕಟ್ಟೀಮನಿಯವರ ಕಾದಂಬರಿಗಳ ಬಗ್ಗೆ ಮಾತಾಡಿದ ಶ್ರೀ... ಇವರಿಗೆ" ಅಂತ ಸಂಬಂಧ ಸೂತ್ರ ಇರದಿದ್ದರೂ ತಾನು ಬರೆದುಕೊಂಡು ಬಂದಿದ್ದ ಪದ್ಯೋಕ್ತಿಗಳನ್ನೆಲ್ಲ ಒಬ್ಬರಾದ ನಂತರ ಒಬ್ಬರಿಗೆ ಲಗತ್ತಿಸುತ್ತ, ನಿರೂಪಕಿಯೊಬ್ಬರು ವೇದಿಕೆಯ ಗಣ್ಯರ ಜೊತೆಯಲ್ಲೇ ಕುರ್ಚಿ ಹಾಕಿಸಿಕೊಂಡು ಅಲ್ಲಿಂದಲೇ ಎದ್ದೆದ್ದು ಬಂದು ನಿರೂಪಣೆ ಮಾಡುತ್ತಿದ್ದರು. ಜನ ರೋಸಿ ಹೋಗಿ ಜೋರು ಗಲಾಟೆ ಮಾಡಿದಾಗ ಆಕೆ ಒಲ್ಲದ ಮನಸ್ಸಿನಿಂದ ಗೊಣಗುತ್ತ ಸೈಡ್‌ವಿಂಗಿಗೆ ಹೋದಳು. ಆಮಂತ್ರಣ ಪತ್ರಿಕೆಯಲ್ಲಿ ಹೆಸರಿರುವವರಷ್ಟೇ ವೇದಿಕೆಯಲ್ಲಿ ಕೂರುವುದು ಸಭಾಸಂಪ್ರದಾಯ. ನಿರೂಪಕರಾದವರು ಸ್ವಲ್ಪವೂ ಸಂಕೋಚವಿಲ್ಲದೆ ಅವರ ಪಕ್ಕ ಕುರ್ಚಿ ಹಾಕಿಸಿಕೊಂಡು ಕೂತಾಗಲೆಲ್ಲ ನೋಡುಗರಿಗೆ ಇರುಸುಮುರುಸಾಗುತ್ತದೆ. ಸಾಲದ್ದಕ್ಕೆ ಇನ್ನೂ ಕೆಲವರು ಸ್ವಾಗತ ಮಾಡಿದವರು, ವಂದನಾರ್ಪಣೆ ಮಾಡಲಿರುವವರಿಗೂ ತಮ್ಮ ಜೊತೆ ಮತ್ತೆರಡು ಕುರ್ಚಿ ಹಾಕಿಸಿ ಕೂರಿಸಿಕೊಂಡುಬಿಡುವುದುಂಟು. ವಿರೋಧ ವ್ಯಕ್ತವಾದರೆ ತಮ್ಮ ಸಹಾಯಕ್ಕಿರಲಿ ಎಂದಿರಬೇಕೇನೋ! ಇದಕ್ಕಿಂತ ಇನೂ ಅಸಹ್ಯವೆಂದರೆ ಕಾರ್ಡಿನಲ್ಲಿ ಹೆಸರಿರದ ಯಾರ್ಯಾರನ್ನೋ ತಕ್ಷಣಸ್ಫೂರ್ತಿಯಿಂದ ವೇದಿಕೆಗೆ ಆಹ್ವಾನಿಸಿ ಅಧಿಕಪ್ರಸಂಗ ಮೆರೆಯುವುದು. ನಿರೂಪಕರೇ ಹೆಚ್ಚು ಕಮ್ಮಿ ವೇದಿಕೆ ನಿರ್ವಹಣೆ ಮಾಡುವವರೂ ಆದ್ದರಿಂದ ಆಯೋಜಕರು ಇವರ ಬಗ್ಗೆ ಎಚ್ಚರ ವಹಿಸಬೇಕಾದುದು ಅಗತ್ಯ.

ಅರೆಬರೆ ತಿಳಿವಳಿಕೆಯ ಆತ್ಮರತಿಯ ಜನ ಅತ್ಯಂತ ಹೆಚ್ಚು ಇಷ್ಟಪಡುವ ಜವಾಬ್ದಾರಿಯೇ ನಿರೂಪಣೆ. ಇವರಲ್ಲಿ ಭಾಷಣ ಮಾಡುವಷ್ಟು ಸರಕಿರುವುದಿಲ್ಲ. ಬಾಯ್ಬಿಪಲ ಹತ್ತಿಕ್ಕಿಕೊಳ್ಳುವಷ್ಟು ತಾಳ್ಮೆ ಇರುವುದಿಲ್ಲ. ಎಷ್ಟೋ ಜನ ನಿರೂಪಣೆಯ ಮೂಲಕ ಸಭಾಕಂಪನವನ್ನು ಮೀರುವ ಬಗೆಯನ್ನು ಕಲಿತುಕೊಂಡು ಮುಖ್ಯ ಭಾಷಣಕಾರರಾಗಿ ಪದೋನ್ನತಿ ಪಡೆಯುತ್ತಾರೆ. ಆದರೆ ಕೆಲವರು ಮಾತ್ರ 'ಭಾಷಣ ಒಂದು ಗಂಟೆ ಮಾತ್ರ, ನಿರೂಪಣೆಯಾದರೆ ಸಮಾರಂಭ ಪೂರ್ತಿ ಮಿಂಚಬಹುದು' ಎಂದು ಸಾಯುವವರೆಗೂ ನಿರೂಪಣೆಗೇ ಜೋತುಬಿದ್ದು, ಏನನ್ನೂ ಓದದೆ, ಹೊಸ ವಿಚಾರಕ್ಕೆ ಕಿವಿಯಾಗದೆ, ಅವೇ ಸವಕಲು ಶಬ್ದಗಳ ಜಾಲದಲ್ಲಿ ಸಿಲುಕಿ ಜಡ್ಡು ಹಿಡಿಯುತ್ತಾರೆ. ಈಗೀಗ ನಿರೂಪಕರ ಹೆಸರನ್ನೂ ಕಾರ್ಡಿನಲ್ಲಿ ಛಾಪಿಸುವ ಪರಿಪಾಠ ಆರಂಭವಾಗಿ ಇವರಿಗೆ ಇನ್ನೂ ಹುಚ್ಚು ಕೆರಳಿದಂತಾಗಿಬಿಟ್ಟಿದೆ. ಇಷ್ಟರ ಮೇಲೆ ಒಂದೇ ಕಾರ್ಯಕ್ರಮವನ್ನು ಗಂಡು ಹೆಣ್ಣು ಸೇರಿ ಯುಗಳಗೀತೆಯ ರೂಪದಲ್ಲಿ ನಿರೂಪಣೆ ಮಾಡುವ ಹುಚ್ಚಾಟ ಆರಂಭವಾಗಿದೆ.

ನಿರೂಪಣೆಯ ಸರಿಯಾದ ಕ್ರಮವೆಂದರೆ ನೇಪಥ್ಯದಲ್ಲಿ ಅಥವಾ ಕೆಳಗೆ ಕುಳಿತು ಅಥವಾ ಆಕಾಶವಾಣಿ ಮಾದರಿಯಲ್ಲಿ ಕ್ಲುಪ್ತವಾಗಿ ನಿರೂಪಿಸುವುದು. ಧಾರವಾಡದ ಸಾಹಿತ್ಯ ಸಂಭ್ರಮ, ಹೆಗ್ಗೋಡಿನ ಸಂಸ್ಕೃತಿ ಶಿಬಿರ ಹಾಗೂ ಮೂಡುಬಿದಿರೆಯ ನುಡಿಸಿರಿಗಳಲ್ಲಿನ ನಿರೂಪಣಾ ವಿಧಾನಗಳನ್ನು, ಸಮಯಪ್ರಜ್ಞೆಯನ್ನು ಉದಾಹರಣೆಯಾಗಿ ನೋಡಬಹುದು. ದುಡ್ಡು ಕೊಟ್ಟು ಹೊರಗಿಂದ ತಜ್ಞರನ್ನು ಕರೆಸಿ ಅವರ ಸಮಯವನ್ನೆಲ್ಲ ಸ್ಥಳೀಯ ನಿರೂಪಕನೊಬ್ಬ ನುಂಗಿ ನೀರು ಕುಡಿದರೆ ಅವರನ್ನು ಕರೆಸಿ ಫಾಯಿದೆ ಏನಾಯ್ತು ಅಂತ ಜನ ಯೋಚಿಸಬೇಕು, ಸಂಘಟಕರು ತಿಳಿದುಕೊಳ್ಳಬೇಕು.

ಕವಿಗಳಿಗೆ ಒಂದೇ ಪದ್ಯವನ್ನು ಅದೂ ಸಾಲುಗಳನ್ನು ಪುನರುಚ್ಚರಿಸದೆ ಓದುವಂತೆ ತಾಕೀತು ಮಾಡುವ ಅಧ್ಯಕ್ಷರು, ನಿರೂಪಕರ ಅತಿ ವಾಚಾಳಿತನಕ್ಕೆ ಮೊದಲು ಕಡಿವಾಣ ಹಾಕಬೇಕು. ಆ ಸಭೆಯ ಆಯೋಜಕರು, ಆ ಗೋಷ್ಠಿಯ ಅಧ್ಯಕ್ಷರು, ಅಲ್ಲಿ ನೆರೆದ ಸಭಿಕರು ಮತ್ತು ಅದನ್ನು ವರದಿ ಮಾಡುವ ಪತ್ರಕರ್ತರು ಎಲ್ಲರಿಗೂ ಸೇರಿದ ಸಾಂಸ್ಕೃತಿಕ ಜವಾಬ್ದಾರಿಯಿದು. ಅದಕ್ಕಾಗಿ